# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1 (94) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 04.03.2025 |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಇತ್ತೀಚೆಗೆ ಬೆಂಗಳೂರಲ್ಲಿ ಜರುಗಿದ ಇನ್ವೆಸ್ಟ್ ಕರ್ನಾಟಕ-2025 ಹೂಡಿಕೆದಾರರ ಸಮಾವೇಶದಲ್ಲಿ ನಮ್ಮ ದೇಶದ ವಿವಿಧ ರಾಜ್ಯಗಳಿಂದ ಮತ್ತು ಅಂತರಾಷ್ಟ್ರೀಯ ಮಟ್ಟದಿಂದ ಎಷ್ಟು ಉದ್ದಿಮೆದಾರರು ಭಾಗವಹಿಸಿದರು;<br>(ಪ್ರತ್ಯೇಕ ಮಾಹಿತಿ ನೀಡುವುದು)</td><td>ಇತ್ತೀಚೆಗೆ ಬೆಂಗಳೂರಲ್ಲಿ ಜರುಗಿದ “ಇನ್ವೆಸ್ಟ್ ಕರ್ನಾಟಕ-2025” ಸಮಾವೇಶದಲ್ಲಿ ಒಟ್ಟು 3250 ಉದ್ದಿಮೆದಾರರು ಭಾಗವಹಿಸಿದ್ದು, ವಿವರಗಳು ಈ ಕೆಳಕಂಡಂತಿವೆ;
<table>
<tr><th>ವಿವರ</th><th>ಸಂಖ್ಯೆ</th></tr>
<tr><td>ವಿವಿಧ ರಾಜ್ಯಗಳಿಂದ</td><td>286</td></tr>
<tr><td>ವಿದೇಶಗಳಿಂದ</td><td>72</td></tr>
<tr><td>ಕರ್ನಾಟಕ ರಾಜ್ಯದಿಂದ</td><td>2892</td></tr>
</table></td></tr>
<tr><td>ಆ</td><td>ಈ ಸಮಾವೇಶದಲ್ಲಿ ಎಷ್ಟು ಹೊಸ ಉದ್ಯಮಗಳು ಪ್ರಾರಂಭವಾಗುವ ಕುರಿತು ಒಡಂಬಡಿಕೆಗಳಾಗಿವೆ; ಯಾವ ಯಾವ ಜಿಲ್ಲೆಯಲ್ಲಿ ಹೊಸ ಉದ್ಯಮ ಪ್ರಾರಂಭಿಸಲು ಹೂಡಿಕೆದಾರರು ಇಚ್ಛೆ ಪಟ್ಟಿದ್ದಾರೆ; ಮತ್ತು ಹೂಡಿಕೆ ಮಾಡುವ ಬಂಡವಾಳ ಎಷ್ಟು?<br>(ಜಿಲ್ಲಾವಾರು ಮಾಹಿತಿ ನೀಡುವುದು)</td><td>ಇನ್ವೆಸ್ಟ್ ಕರ್ನಾಟಕ-2025 ರಲ್ಲಿ ಒಟ್ಟು 98 ಕಂಪನಿಗಳೊಂದಿಗೆ ಒಡಂಬಡಿಕೆಗಳಾಗಿವೆ. ಅವುಗಳ ಹೂಡಿಕೆಯು ರೂ. 6,23,970 ಕೋಟಿಯಾಗಲಿದೆ.<br><br>ಅಲ್ಲದೇ, ರೂ. 4,03,533 ಕೋಟಿ ಬಂಡವಾಳ ಹೂಡಿಕೆ ಮಾಡಲು 1101 ಕಂಪನಿಗಳು ಸಂಬಂಧಿಸಿದ ಸಮಿತಿಗಳಿಂದ ಅನುಮೋದನೆ ಪಡೆದಿರುತ್ತಾರೆ.<br><br>ಒಡಂಬಡಿಕೆ ಮಾಡಿಕೊಂಡ ಯೋಜನೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.</td></tr>
<tr><td>ಇ</td><td>ಈ ಸಮಾವೇಶದಲ್ಲಿ ಕೃಷಿ, ಕೈಗಾರಿಕೆ, ಆರೋಗ್ಯ ಹಾಗೂ ವಿಜ್ಞಾನ ತಂತ್ರಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಗೆ ಒಡಂಬಡಿಕೆಯಾಗಿರುವ ಕಂಪನಿಗಳು ಎಷ್ಟು; ಮತ್ತು ಅವುಗಳ ಹೂಡಿಕೆಯ ಮೊತ್ತ ಎಷ್ಟು;</td><td>“ಇನ್ವೆಸ್ಟ್ ಕರ್ನಾಟಕ-2025”ಸಮಾವೇಶದಲ್ಲಿ Aerospace, Auto & EV, Core (Cement & Steel), ESDM, Food & Agriculture, General manufacturing, Infrastructures & Logistics, R&D/GCC, Renewable Energy ಮತ್ತು Pharma ಗಳಂತಹ ವಿವಿಧ ವಲಯಗಳಲ್ಲಿ ಒಟ್ಟು 98 ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ.<br><br>ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಲಿರುವ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.</td></tr>
<tr><td>ಈ</td><td>ಈ ಹಿಂದೆ ನಡೆದ ಇನ್ವೆಸ್ಟ್ ಕರ್ನಾಟಕ ಸಮಾವೇಶದಲ್ಲಿ ಉದ್ಯಮ ಪ್ರಾರಂಭಿಸಲು ಒಡಂಬಡಿಕೆ ಮಾಡಿಕೊಂಡು ಪ್ರಾರಂಭ ಮಾಡಿರುವ ಉದ್ಯಮಗಳು ಎಷ್ಟು; (ವಿವರವಾದ ಸಂಪೂರ್ಣ ಮಾಹಿತಿ ನೀಡುವುದು)</td><td>ಈ ಹಿಂದೆ ನಡೆದ “ಇನ್ವೆಸ್ಟ್ ಕರ್ನಾಟಕ-2022”ರ ಸಮಾವೇಶದಲ್ಲಿ ಉದ್ಯಮ ಪ್ರಾರಂಭಿಸಲು 57 ಕಂಪನಿಗಳೊಂದಿಗೆ ಒಟ್ಟು ರೂ. 5,41,369/- ಕೋಟಿ ಬಂಡವಾಳ ಹೂಡಲು ಒಪ್ಪಂದಗಳಿಗೆ ಸಹಿ ಮಾಡಲಾಗಿತ್ತು.<br><br>ಸದರಿ 57 ಕಂಪನಿಗಳಲ್ಲಿ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 20 ಕಂಪನಿಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪ್ರಸಾವನೆಗಳಿಂದ ಒಟ್ಟು ರೂ. 2,01,167/- ಕೋಟಿ ಬಂಡವಾಳ ಹೂಡಿಕೆಯಾಗಲಿದೆ ಹಾಗೂ 70,740 ಉದ್ಯೋಗ ಸೃಜನೆಯಾಗಲಿದೆ. ಇವುಗಳಲ್ಲಿ 2 ಯೋಜನೆಗಳು ಅನುಷ್ಠಾನಗೊಂಡಿರುತ್ತವೆ.</td></tr>
</table>

| | | |
|---|---|---|
| | | ಮುಂದುವರೆದಂತೆ, ಈ ಸಮಾವೇಶದ ಸಮಯದಲ್ಲಿ 606 ಯೋಜನೆಗಳಿಗೆ ಒಟ್ಟು ರೂ.3,26,015/- ಹೂಡಿಕೆಗೆ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಅನುಮೋದನೆ ನೀಡಲಾಗಿತ್ತು.<br><br>"ಇನ್ವೆಸ್ಟ್ ಕರ್ನಾಟಕ-2022"ರ ಸಮಾವೇಶದಲ್ಲಿ ಒಡಂಬಡಿಕೆ ಮಾಡಿಕೊಂಡ ಹಾಗೂ ಅನುಮೋದನೆ ಪಡೆದ ಯೋಜನೆಗಳಲ್ಲಿ, ಇಲ್ಲಿಯವರೆಗೆ ಒಟ್ಟು 52 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ.45,001/- ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 89,816 ಜನರಿಗೆ ಉದ್ಯೋಗ ದೊರೆತಿರುತ್ತದೆ. ಬಾಕಿ ಉಳಿದ ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿರುತ್ತದೆ.<br><br>ಇವುಗಳೆಲ್ಲ ಬೃಹತ್ ಯೋಜನೆಗಳಾಗಿರುವುದರಿಂದ, ಅನುಷ್ಠಾನಕ್ಕೆ ಕನಿಷ್ಠ 3-5 ವರ್ಷಗಳು ಬೇಕಾಗುತ್ತದೆ. |
| ಉ | ಇನ್ವೆಸ್ಟ್ ಕರ್ನಾಟಕ-2025 ಈ ಸಮಾವೇಶಕ್ಕೆ ಖರ್ಚಾದ ಹಣ ಎಷ್ಟು; ಹಾಗೂ ಈ ಸಮಾವೇಶದ ಮೂಲಕ ಎಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ? (ವಿವರವಾದ ಮಾಹಿತಿ ನೀಡುವುದು) | ಇನ್ವೆಸ್ಟ್ ಕರ್ನಾಟಕ-2025 ಸಮಾವೇಶವನ್ನು ರೂ. 90 ಕೋಟಿಗಳ ವೆಚ್ಚದಲ್ಲಿ ಆಯೋಜಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಇದರಲ್ಲಿ ಇಲ್ಲಿಯವರೆಗೆ ರೂ. 75.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ಸದರಿ ಸಮಾವೇಶವು ಇತ್ತೀಚೆಗೆ ದಿನಾಂಕ 14.02.2025 ರಂದು ಮುಕ್ತಾಯವಾಗಿರುವುದರಿಂದ, ಸಮಾವೇಶಕ್ಕಾಗಿ ತಗುಲಿದ ವಾಸ್ತವಿಕ ವೆಚ್ಚದ ವಿವರಗಳನ್ನು ಕ್ರೋಢೀಕರಿಸಲಾಗುತ್ತಿದ್ದು, ಅಂತಿಮ ಹಂತದಲ್ಲಿರುತ್ತದೆ.<br><br>ಇನ್ವೆಸ್ಟ್ ಕರ್ನಾಟಕ-2025 ರಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಹಾಗೂ ಅನುಮೋದನೆ ಪಡೆದಿರುವ ಯೋಜನೆಗಳಿಂದ ಅಂದಾಜು 6 ಲಕ್ಷ ಜನರಿಗೆ ಉದ್ಯೋಗ ಲಭಿಸಲಿದೆ. |

ಸಿಐ 45 ಎಸ್‌ಪಿಐ 2025

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

LCQ-1(94)

# ANNEXURE-1

District Wise Abstract of MOU's Signed during "Invest Karnataka 2025: Global Investors Meet"

| Sl. NO. | District Name | No.of Units | Investment (in INR Crore) |
|---|---|---|---|
| 1 | Bagalkote | 3 | 3105 |
| 2 | Ballari | 4 | 28350 |
| 3 | Bengaluru Rural | 30 | 26331 |
| 4 | Bengaluru Urban | 14 | 35297 |
| 5 | Belagavi | 4 | 26315 |
| 6 | Chamarajnagara | 2 | 2750 |
| 7 | Chitradurga | 1 | 50000 |
| 8 | Dakshina Kannada | 3 | 2400 |
| 9 | Davanagere | 1 | 10000 |
| 10 | Dharawada | 1 | 125 |
| 11 | Kalaburagi | 5 | 68050 |
| 12 | Kolara | 3 | 1254 |
| 13 | Koppala | 3 | 100975 |
| 14 | Mysuru | 6 | 26638 |
| 15 | Raichuru | 1 | 150 |
| 16 | Ramanagara | 1 | 450 |
| 17 | Tumakuru | 6 | 75480 |
| 18 | Udupi | 1 | 1600 |
| 19 | Vijayanagara | 3 | 119100 |
| 20 | Vijapura | 5 | 35600 |
| 21 | Yadagiri | 1 | 10000 |
| | **Total** | **98** | **623970** |

**Starred LCQ 1 (94)**

**Annexure-2**

| **Sectorwise MoU's Signed in GIM 2025** | | | |
|---|---|---|---|
| **SL. No.** | **Sector** | **No. of MoUs** | **Investment (INR Cr)** |
| 1 | Aero Space | 4 | 4,340 |
| 2 | Auto & EV | 7 | 20,342 |
| 3 | (Cement & Steel) Core | 14 | 1,43,700 |
| 4 | ESDM | 12 | 37,560 |
| 5 | Food & Agriculture | 10 | 6,271 |
| 6 | General Manufacturing | 23 | 46,218 |
| 7 | Infrastructures & Logistics | 10 | 19,382 |
| 8 | R & D/ GCC | 3 | 1,602 |
| 9 | Renewable Energy | 14 | 3,44,425 |
| 10 | Pharma | 1 | 130 |
| | | **98** | **623970** |